Extending the Railway line up to Sathyamangalam from Chamarajanagar

*Q.—343. **Sri M. C. BASAPPA** (Chamarajanagar).—

Will the Government be pleased to state :—

(*a*) whether any survey was conducted by the Railway authorities to extend the Railway line upto Satyamangalam from Chamarajanagar ;

(*b*) whether they have recommended to the Union Government to take up the work early ?

A.—**Sri G. B. SHANKER RAO** (Parliamentary Secretary to the Minister for Public Works).—

(*a*) Yes.

(*b*) Yes.

ಶ್ರೀ ಎಂ. ಸಿ. ಬಸಪ್ಪ.—ಈ ಮಾರ್ಗದ ಸರ್ವೆ ಮಾಡಿದರೆ ಅದರ ಫಲತಾಂಶ (ರಿಸಲ್ಟ್) ಏನು ಸ್ವಾಮಿ ?

ಶ್ರೀ ಜಿ. ಬಿ. ಶಂಕರರಾವ್.—1948-49 ರಲ್ಲಿ ಚಾಮರಾಜನಗರ-ಸತ್ಯಮಂಗಲ ಮಾರ್ಗದ ಸರ್ವೆ ಆಗಿದೆ. ಚಾಮರಾಜನಗರದಿಂದ ಕೊಯಮತ್ತೂರು ವರೆಗೂ 101 ಮೈಲಿ ಉದ್ದದ ರಸ್ತೆಯನ್ನು ತಾಳವಾಡಿ, ಕೊತ್ತಮಂಗಲ-ಸತ್ಯಮಂಗಲ ಮಾರ್ಗವಾಗಿ ರೈಲ್ವೆ ಮಾರ್ಗವನ್ನು ರಚಿಸುವ ಇನ್ನೊಂದು ಸಲಹೆಯೂ ಇದೆ. ಇದರ ಸರ್ವೆ ಆದ ನಂತರ ವಿವರಗಳನ್ನು ಹೇಳಬಹುದು.

Sri SANJEEVANATH AIKALA.—Was it not a condition of the Government while handing over the line of Chamarajnagar and Mysore that it should be extended from Chamarajnagar to Saytamangala ?

Sri G. B. SHANKAR RAO.—There was no such condition.

ಶ್ರೀ ಎಂ. ಸಿ. ಬಸಪ್ಪ.—ಬಹಳ ಹಿಂದೆಯೇ ಚಾಮರಾಜನಗರ-ಸತ್ಯಮಂಗಲ ಮಾರ್ಗದ ಸರ್ವೆ ಆಗಿದ್ದರೂ ಕೆಲಸ ನಡೆಯದೆ ಇರುವುದಕ್ಕೆ ಕಾರಣವೇನು ? ಇದನ್ನು ಯಾವಾಗ ಕೈಗೊಳ್ಳಬೇಕೆಂದು ರೈಲ್ವೆ ಇಲಾಖೆಯವರು ತೀರ್ಮಾನಮಾಡಿದ್ದಾರೆ ?

Sri G. B. SHANKAR RAO.—In 1951-52 it was conceded by the then Ministry. After that this line was not found to be econmic and so it was not considered then.

ಶ್ರೀ . ಎಂ. ಸಿ. ಬಸಪ್ಪ.—ಸರ್ಕಾರದವರು ಈಗಲಾದರೂ ರೈಲ್ವೆ ಇಲಾಖೆಗೆ ಒತ್ತಾಯ ಮಾಡಿ ಇದು ಬಹಳ ಅಗತ್ಯ ಎಂದು ಬೇಗ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಡುತ್ತೀರಾ ?

ಶ್ರೀ ಜಿ. ಬಿ. ಶಂಕರರಾವ್.—ಮೇಲಿಂದ ಮೇಲೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ರೈಲ್ವೆ ಮಂತ್ರಿಗಳು ಇಲ್ಲಿಗೆ ಬಂದಾಗ ಮತ್ತು ಮಾನ್ಯ ಮುಖ್ಯ ಮಂತ್ರಿಗಳೂ, ಲೋಕೋಪಯೋಗಿ ಶಾಖೆಯ ಮಂತ್ರಿಗಳೂ ದೆಲ್ಲಿಗೆ ಹೋದಾಗ ಈ ಮಾರ್ಗವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತಿದ್ದಾರೆ. ಈ ಮಾರ್ಗದಲ್ಲಿ ಸಂಚಾರ ಮತ್ತು ವಸ್ತು ಸಾಗಾಣಿಕೆಯ ಪ್ರಮಾಣದ ಅಂಕಿ ಅಂಶಗಳ ಬಗ್ಗೆ ಸರ್ವೆ ನಡೆಸಿ, ಅನಂತರ ಪರಿಶೀಲಿಸುತ್ತೇವೆಂದು ಅವರು ಹೇಳುತ್ತಾರೆ.

———